# ನೀಲಾಂಬಿಕೆ:
# ವಚನ ಚಳುವಳಿಯ ಇತಿಹಾಸದಲ್ಲಿ ಒಂದು ಮಹತ್ವದ ಮಹಿಳಾ ಶಕ್ತಿ

**ಭೀಮಾಬಾಯಿ ಸಂಗಪ್ಪ ಮಾಳಶೆಟ್ಟಿ*** & **ಸುಮಾ ಎಸ್. ನಿರ್ಣಿ****

**DOI: https://doi.org/10.5281/zenodo.19501457**

**ABSTRACT**

ಹನ್ನೆರಡನೆಯ ಶತಮಾನದ ವಚನ ಚಳವಳಿಯಲ್ಲಿ ನೀಲಾಂಬಿಕೆಯು ಅತ್ಯಂತ ಪ್ರಮುಖ ಹಾಗೂ ಪ್ರಭಾವಶಾಲಿ ಶರಣೆಯಾಗಿ ಗುರುತಿಸಿಕೊಂಡಿದ್ದಾಳೆ. ಕೇವಲ ಬಸವಣ್ಣನವರ ಮಡದಿಯಾಗಿರದೆ, 'ವಿಚಾರಪತ್ನಿ'ಯಾಗಿ ಕಲ್ಯಾಣದ ಕ್ರಾಂತಿಯಲ್ಲಿ ಸಕ್ರಿಯ ಪಾತ್ರ ವಹಿಸಿರುವುದು ಆಕೆಯ ವ್ಯಕ್ತಿತ್ವದ ಉನ್ನತಿಯನ್ನು ತೋರುತ್ತದೆ. 'ಸಂಗಯ್ಯ' ಎಂಬ ಅಂಕಿತನಾಮದಲ್ಲಿ 288ಕ್ಕೂ ಹೆಚ್ಚು ವಚನಗಳನ್ನು ರಚಿಸಿರುವ ಈಕೆಯ ಸಾಹಿತ್ಯದಲ್ಲಿ ಆತ್ಮನಿವೇದನೆ, ಬಸವನಿಷ್ಠೆ, ಲಿಂಗನಿಷ್ಠೆ ಹಾಗೂ ಅಸಾಧಾರಣ ವೈಚಾರಿಕತೆ ಮೇಳೈಸಿದೆ. ಇವರಿಬ್ಬರ ಒಡನಾಟವು ನಾಡಿನ ಪ್ರಥಮ ಅಂತರ್ಜಾತಿ ಹಾಗೂ ಪ್ರೇಮ ವಿವಾಹವೆಂದು ವಿಶ್ಲೇಷಿಸಲಾಗಿದೆ. ಮಹಿಳೆಯರ ನೇರ ಅಭಿವ್ಯಕ್ತಿ ಹಾಗೂ ಸ್ವತಂತ್ರ ವಿಚಾರಪರತೆಗೆ ಕನ್ನಡಿಯಾಗಿರುವ ನೀಲಾಂಬಿಕೆಯ ವಚನಗಳು, ಕೇವಲ ಅನುಭವದಿಂದ ಅನುಭಾವದೆಡೆಗಿನ ಆಧ್ಯಾತ್ಮಿಕ ಪಯಣವನ್ನು ಮಾತ್ರವಲ್ಲದೆ, ಸಮಕಾಲೀನ ಚಾರಿತ್ರಿಕ ಘಟನಾವಳಿಗಳನ್ನೂ ಕಟ್ಟಿಕೊಡುತ್ತವೆ. ತನ್ನದೇ ಆದ ಅಸ್ಮಿತೆಯನ್ನು ಉಳಿಸಿಕೊಂಡು ತತ್ವನಿಷ್ಠ ಬದುಕು ಸವೆಸಿದ ಶರಣೆಯ ಜೀವನ ಮೌಲ್ಯಗಳನ್ನು ಇಲ್ಲಿ ಸಮಗ್ರವಾಗಿ ಕಟ್ಟಿಕೊಡಲಾಗಿದೆ.

**KEYWORDS:** ನೀಲಾಂಬಿಕೆ, ವಿಚಾರಪತ್ನಿ, ವಚನ ಸಾಹಿತ್ಯ, ಶರಣ ಚಳವಳಿ, ವೈಚಾರಿಕತೆ.

* **ಭೀಮಾಬಾಯಿ ಸಂಗಪ್ಪ ಮಾಳಶೆಟ್ಟಿ**, ಸಂಶೋಧನ ವಿದ್ಯಾರ್ಥಿನಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

** **ಡಾ. ಸುಮಾ ಎಸ್. ನಿರ್ಣಿ**, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜಿ.ಪಿ. ಪೊರವಾಲ ಕಲಾ, ವಾಣಿಜ್ಯ ಹಾಗೂ ವಿ.ವಿ. ಸಾಲಿಮಠ ವಿಜ್ಞಾನ ಮಹಾವಿದ್ಯಾಲಯ, ಸಿಂದಗಿ.

**ಪ್ರಸ್ತಾವನೆ:**

ವೈದಿಕ ಧರ್ಮ, ಬೌದ್ಧ ಧರ್ಮ, ಜೈನ ಧರ್ಮ, ಮುಂದೆ ಬಂದ ಪಿತೃ ಪ್ರಧಾನ ಸಂಸ್ಕೃತಿ ಬೆಳೆದು ನಿಂತಾಗ ಸ್ತ್ರೀಯ ಸ್ಥಿತಿ ಚಿಂತಾಜನಕವಾಯಿತು. ವರ್ಣಾಶ್ರಮ ಧರ್ಮವು ಸ್ತ್ರೀಯರನ್ನು, ದಲಿತರನ್ನು ಮೂಲೆಗುಂಪು ಮಾಡಿತು ಹಾಗೂ ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ಸ್ತ್ರೀಗಾಗಲಿ, ದಲಿತನಿಗಾಗಲಿ ಸ್ಥಳವೇ ಇರಲಿಲ್ಲ; ದಲಿತ ಪಂಚಮನಾದ, ಸ್ತ್ರೀ ಶೂದ್ರಾತಿ ಶೂದ್ರಳಾದಳು. ಹೆಣ್ಣನ್ನು ದೇವತೆಯೆಂದು ಹೊಗಳಿದ, ರಾಕ್ಷಸಿ ಎಂದು ತೆಗಳಿದ ಈ ಪವಿತ್ರ ಭರತ ಖಂಡದಲ್ಲಿ ಹೆಣ್ಣನ್ನು ಹೆಣ್ಣನ್ನಾಗಿ ಕಂಡು ಗೌರವಿಸಿದವರೆಂದರೆ 12ನೇ ಶತಮಾನದ ಶಿವಶರಣರು. 12ನೇ ಶತಮಾನದ ವಚನಕಾರ್ತಿಯರು ಧರ್ಮದಲ್ಲಿ ಏಕತೆಯನ್ನು ತಂದರೆ ಸಮಾಜದ ಇನ್ನಿತರ ಅಂಶಗಳು ಸುಧಾರಣೆಯಾಗಬಲ್ಲವೆಂಬುದನ್ನು ಮನಗಂಡ ಬಹುದೊಡ್ಡ ಚಿಂತಕರಾಗಿದ್ದರು. ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಸುಲಿಗೆಯನ್ನು ಶರಣೆಯರು ತಪ್ಪಿಸಿದರು ಮತ್ತು ಅಂತಹ ಶರಣೆಯರ ಸಾಲಿನಲ್ಲಿ ತುಂಬಿದ ಕೊಡ ನೀಲಮ್ಮಳು ಒಬ್ಬಳು.

**ನೀಲಾಂಬಿಕೆಯ ವೈಯಕ್ತಿಕ ವಿವರಗಳು:**

ಶರಣೆಯ ಮೊದಲ ಹೆಸರು ಮಾಯಾದೇವಿಯೆಂದು ತಿಳಿದುಬರುತ್ತದೆ, ನಂತರದಲ್ಲಿ ನೀಲಮ್ಮ, ನೀಲಾಂಬಿಕೆ, ನೀಲಲೋಚನೆಯೆಂದು ಕರೆಯಲಾಗಿದೆ. ನೀಲಾಂಬಿಕೆಯು ಸಿದ್ಧರಸ ಮತ್ತು ಪದ್ಮಗಂಧಿಯರ ಮಗಳು. ತಂದೆಯ ಸ್ವಂತ ಗ್ರಾಮ ಇಂಗಳೇಶ್ವರವಾಗಿದೆ ಹಾಗೂ ಶರಣೆಯ ಜನ್ಮಸ್ಥಳ ಮಂಗಳವೇಡ. ಹನ್ನೆರಡನೆಯ ಶತಮಾನದ ಬಸವಾದಿ ಸಮಕಾಲೀನರು (ಕ್ರಿ.ಶ. 1160).

**ಕಾಯಕ ಮತ್ತು ಸಾಹಿತ್ಯ:**

ಕಲ್ಯಾಣಕ್ಕೆ ಬರುವ ಮೊದಲು ಇವರು ಕವಯತ್ರಿ ಆಗಿದ್ದರು ಹಾಗೂ ಮಹಾಮನೆಯ ಎಲ್ಲ ಕಾರ್ಯಭಾರ ಇವರ ಕಾಯಕವಾಗಿತ್ತು. ಒಟ್ಟು 288 ವಚನಗಳು ಲಭ್ಯವಿವೆ ಮತ್ತು ಇವರ ಅಂಕಿತನಾಮ 'ಸಂಗಯ್ಯ'.

**ಬಸವಣ್ಣ ಮತ್ತು ನೀಲಾಂಬಿಕೆಯರ ಸಂಬಂಧ:**

ಬಲದೇವ ಮತ್ತು ಸಿದ್ಧರಸ ಇವರಿಬ್ಬರೂ ಬಸವಣ್ಣನವರ ತಾಯಿ ಮಾದಲಾಂಬಿಕೆಯ ಸಹೋದರರಾಗಿದ್ದರು. ಬಲದೇವಮಂತ್ರಿಯ ಮಗಳಾಗಿದ್ದ ಗಂಗಾಂಬಿಕೆಯನ್ನು ಮದುವೆಯಾಗಲು ಕಾರಣವಾದರೂ ಏನು, ಮಕ್ಕಳಾಗಲಿಲ್ಲವೆಂಬ ಕಾರಣಕ್ಕೆ ನೀಲಾಂಬಿಕೆಯನ್ನು ಬಸವಣ್ಣನವರು ಮದುವೆಯಾಗಿರಬಹುದೆಂದು ಅಂದುಕೊಂಡರೆ, ಗಂಗಾಂಬಿಕೆಗೆ ಸಿದ್ಧರಸ ಹೆಸರಿನ ಮಗನಿದ್ದ. ಲಕ್ಕಣ್ಣ ದಂಡೇಶ ಹಾಗೂ ಡಾ. ಎಂ.ಎಂ. ಕಲಬುರ್ಗಿಯವರ ಪ್ರಕಾರ ನೀಲಲೋಚನೆ ಸಿದ್ಧರಸನ ಮಗಳಾಗಿರದೆ, ಕ್ಷತ್ರಿಯ ಕುಲದ ಬಿಜ್ಜಳನ ತಂಗಿಯಾಗಿರಬೇಕೆಂದು ತಿಳಿಯುವುದು ಸೂಕ್ತವೆನಿಸುತ್ತದೆ.

ನೀಲಲೋಚನೆಯ ವೈಯಕ್ತಿಕ ವಿವರಗಳು ಲಭ್ಯವಿಲ್ಲದಿದ್ದರೂ ಅವಳ ಪ್ರವೇಶ ಬಸವಣ್ಣನ ಜೀವನದಲ್ಲಿ ಮುಖ್ಯ ಪಾತ್ರವಹಿಸಿದೆ ಎಂಬುದು ವಚನ ಸಾಹಿತ್ಯದಿಂದ ತಿಳಿದುಬರುತ್ತದೆ. ಇವಳ ಬಹುತೇಕ ವಚನಗಳು ಬಸವಣ್ಣನ ಸ್ತುತಿ ಹಾಗೂ ಅವನ ಅಗಲುವಿಕೆಯ ವಿಷಯವನ್ನೇ ಧ್ವನಿಸಿವೆ. ಕಲ್ಯಾಣದ ಕ್ರಾಂತಿಯಲ್ಲಿ ಸಕ್ರಿಯವಾಗಿ ತನ್ನನ್ನು ತೊಡಗಿಸಿಕೊಂಡು, ಅನುಭಾವದಿಂದ ವಚನ ರಚನೆ ಮಾಡಿದ್ದು ಇವಳ ವ್ಯಕ್ತಿತ್ವದ ಉನ್ನತಿಗೆ ಕಾರಣವಾಗಿದೆ. 'ಬಸವನ ಅನುಭವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯಾ'

ಎಂದು ಹೇಳುವ ನೀಲಾಂಬಿಕೆಗೆ ತನ್ನ ಪತಿಯೇ ಸರ್ವಸ್ವ.

ತನ್ನ ಪ್ರತಿವಚನದಲ್ಲಿ ಬಸವಾ, ಬಸವಾ ಎಂದು ಹಂಬಲಿಸುತ್ತಿರುವುದನ್ನು ನೋಡಿದಾಗ ಬಸವಣ್ಣ ಮತ್ತು ನೀಲಾಂಬಿಕೆಯರ ಮದುವೆ ಅದು ಅಂತರ್ಜಾತಿ ವಿವಾಹವಾಗಿರುವುದರ ಜತೆಗೆ ಪ್ರೇಮವಿವಾಹವೂ ಆಗಿದ್ದಿರಬೇಕೆಂದು ತಿಳಿಯಲು ಆಧಾರಗಳು ಸಿಗುತ್ತವೆ. ಕನ್ನಡ ನಾಡಿನಲ್ಲಿ ಪ್ರಥಮ ಪ್ರೇಮವಿವಾಹ ಹಾಗೂ ಪ್ರಥಮ ಅಂತರ್ಜಾತಿಯ ವಿವಾಹ ಮಾಡಿಕೊಂಡ ಶ್ರೇಯಸ್ಸು ಬಸವಣ್ಣ–ನೀಲಾಂಬಿಕೆಯರಿಗೆ ಸಲ್ಲುತ್ತದೆ. ಆಕೆ ಕೇವಲ ಬಸವನ ಮಡದಿ ಮಾತ್ರವಲ್ಲದೆ “ವಿಚಾರಪತ್ನಿ”ಯಾಗಿ ಬೆಳೆದೆನೆಂದು ಹೇಳಿದ್ದಾಳೆ.

**ನೀಲಾಂಬಿಕೆಯ ವಚನಗಳ ವಿಶ್ಲೇಷಣೆ:**

ಅಕ್ಕಮಹಾದೇವಿಯನ್ನು ಬಿಟ್ಟರೆ ಅಧಿಕ ಸಂಖ್ಯೆಯಲ್ಲಿ ವಚನಗಳನ್ನು ರಚಿಸಿದ ಶರಣೆ ನೀಲಾಂಬಿಕೆಯಾಗಿದ್ದಾಳೆ. ಇಲ್ಲಿಯವರೆಗೆ ಈಕೆಯ 126 ವಚನಗಳು ಲಭ್ಯವಾಗಿದ್ದವು, ಆದರೆ ಇತ್ತೀಚಿಗೆ ತಿಪಟೂರು ತಾಲ್ಲೂಕಿನ ಮಠವೊಂದರಲ್ಲಿ ನೀಲಮ್ಮನ ಒಟ್ಟು 288 ವಚನಗಳು ದೊರಕಿವೆ. “ಪ್ರಸಾದ ಸಂಪಾದನೆ” ಕೃತಿಯನ್ನು ನೀಲಾಂಬಿಕೆಯೇ ರಚಿಸದ್ದೆಂದು ಕವಿಚರಿತಕಾರರು ಹೇಳಿದ್ದಾರೆ.

ನೀಲಮ್ಮನ ವಚನಗಳು ಮೇಲ್ನೋಟಕ್ಕೆ ಆತ್ಮ ನಿವೇದನೆ, ಬಸವನಿಷ್ಠೆ, ಲಿಂಗನಿಷ್ಠೆ, ವೈಚಾರಿಕತೆ ಹಾಗೂ ಶರಣರ ಕುರಿತ ವಚನಗಳಾಗಿ ಕಾಣುತ್ತವೆ. ಇವುಗಳನ್ನು ಪ್ರಮುಖವಾಗಿ 5 ವಿಭಾಗಗಳಲ್ಲಿ ಪ್ರಸ್ತುತಪಡಿಸಬಹುದಾಗಿದೆ:

1. ಚಾರಿತ್ರಿಕ/ಸಾಂದರ್ಭಿಕ ಘಟನಾವಳಿಗಳು: ನೇರವಾಗಿ ಅಲ್ಲಲ್ಲಿ ಸೂಚ್ಯವಾಗಿ ಹೇಳುತ್ತಿರುವ ನೀಲಮ್ಮನ ವಚನಗಳು ಸ್ಪಷ್ಟವಾಗಿ ಬಸವಣ್ಣನವರ ಕಾಲಾವಧಿಯ ಸಮಗ್ರ ಘಟನಾವಳಿಗಳನ್ನು ನಮ್ಮ ಮುಂದಿಡುತ್ತವೆ (ಉದಾ: ಲಕ್ಷದ 96 ಸಾವಿರ ದಾಸೋಹ ಕಾರ್ಯಕ್ರಮದ ಕುರಿತು).
2. ಅಕ್ಕಮಹಾದೇವಿಯ ಸಾಹಿತ್ಯಕ ನಿಲುವು: ಬಹಳಷ್ಟು ಲೇಖಕರು ನೀಲಮ್ಮನನ್ನು ಅಕ್ಕಮಹಾದೇವಿಗೆ ಹೋಲಿಸುತ್ತಾರೆ ಮತ್ತು ಇವರು ಅಕ್ಕಮಹಾದೇವಿಯನ್ನು ಪ್ರಸ್ತಾಪಿಸದಿದ್ದರೂ, ಅವರನ್ನು ಅನುಸರಿಸಿದ ಧಾಟಿ ಕಂಡು ಬರುತ್ತದೆ.
3. ಸ್ವಂತ ವಿಚಾರ ಮಂಡಿಸುವ ಕ್ರಮ: ಕಾವ್ಯ ರಚನೆಯಲ್ಲಿ ಮಹಿಳೆಯೊಬ್ಬಳು ನೇರ ಅಭಿವ್ಯಕ್ತಿಯ ಕ್ರಮವನ್ನು ಅಳವಡಿಸಿಕೊಂಡಿರುವುದು ಆ ಕಾಲಕ್ಕಿದ್ದ ಸ್ವತಂತ್ರ ವಿಚಾರಪರತೆಯನ್ನು ತೋರಿಸುತ್ತದೆ.
4. ಶೋಧನಾ ನಿಲವು: ನೀಲಮ್ಮನವರು ವಿಚಾರಪತ್ನಿಯೆಂಬುದಕ್ಕೆ ಕಾರಣ ಅವರಲ್ಲಿರುವ ಶೋಧನಾ ಪರತೆ.
5. ಅನುಭವದಿಂದ ಅನುಭಾವದೆಡೆಗಿನ ಪಯಣ: ನೀಲಮ್ಮನವರ ವಚನಗಳು ಅನುಭವದಿಂದ ಹೇಳಿದ್ದಾಗಿದ್ದು, ಆಧ್ಯಾತ್ಮ ಸಾಧನೆಯ ಮೂಲಕ ನಂತರದಲ್ಲಿ ಅನುಭಾವಕ್ಕೆ ನಡೆಯುವಂತದ್ದನ್ನು ಕಾಣುತ್ತೇವೆ.

**ಇತರ ಪ್ರಮುಖ ಆಯಾಮಗಳು:**

- ಲಿಂಗನಿಷ್ಠೆ: ಭವಿ ಭಕ್ತನಾಗಿ ಹುಟ್ಟಿದ್ದು, ಜಂಗಮ ಸಂಗದಲ್ಲಿ ಬೆಳೆದು ಪರಿಪೂರ್ಣತೆಯ ಮಟ್ಟದಲ್ಲಿ ಬಂದು ಆತ್ಮಸಾಕ್ಷಾತ್ಕಾರ ಪಡೆಯುವ ಅಂಶವನ್ನು ವ್ಯಕ್ತಪಡಿಸಿದ್ದಾಳೆ.
- ಶರಣರ ಕುರಿತು ನಿಲುವು: ಆಕೆ ತಾನು ಶರಣರ ವಂಶದವಳು ಎಂದು ಹೇಳುತ್ತಾ,

ಹಿರಿಯ ಶರಣರ ಸಂಗ ಹಾಗೂ ಶರಣರೊಂದಿಗಿನ ಭಾವನಾತ್ಮಕ ಸಂಬಂಧವನ್ನು ವ್ಯಕ್ತಪಡಿಸಿದ್ದಾಳೆ.

- ಸ್ವರವಚನಗಳು: ವಚನ ಎನ್ನುವ ಪದದೊಂದಿಗೆ ರಾಗ, ತಾಳ, ಸಂಯೋಜನೆ ಸೇರಿ ಸ್ವರವಚನವಾಗಿದೆ; ಏಳು ಸ್ವರವಚನಗಳನ್ನೂ ನೀಲಾಂಬಿಕೆ ರಚಿಸಿದ್ದು, ಅದರಲ್ಲಿ ರುದ್ರಾಕ್ಷಿ ಮಹಿಮೆ, ಲಿಂಗಾಂಗ ಸಾಮರಸ್ಯತೆ, ಭಾವಶುದ್ಧತೆ, ವೈಚಾರಿಕತೆ ಅಂಶಗಳನ್ನು ನೀಡಿದ್ದಾಳೆ.
- ಕಾಲಜ್ಞಾನ ವಚನಗಳು: ಆಕೆಯ ಕಾಲಜ್ಞಾನ ವಚನಗಳು ಮುಂದಿನ ಆಗು–ಹೋಗುಗಳನ್ನು, ಪ್ರಕೃತಿಯಲ್ಲಿನ ಬದಲಾವಣೆಗಳನ್ನು ಮತ್ತು ಮನುಷ್ಯ ಮನುಷ್ಯರೊಳಗಿನ ಸಂಬಂಧವನ್ನು ಕುರಿತು ಹೇಳಿವೆ.

**ಕಲ್ಯಾಣ ಕ್ರಾಂತಿಯಿಂದ ಐಕ್ಯದವರೆಗೆ:**

ಶಿವನು ಸರ್ವಾಂತರ್ಯಾಮಿ ಆಗಿರುವಾಗ ಸಂಗಯ್ಯನನ್ನು ಕಾಣಲು ಕೂಡಲ ಸಂಗಮಕ್ಕೆ ಹೋಗಬೇಕೆ ಎಂದು ಆಕೆ ಕೇಳಿದ ಪ್ರಶ್ನೆ ಬಹಳ ಸೂಕ್ತವಾದುದು. ಆದರೂ ನೀಲಮ್ಮ ಅಪ್ಪಣ್ಣನೊಂದಿಗೆ ಸಂಗಮದ ಕಡೆ ಹೊರಡುತ್ತಾಳೆ. ತಂಗಡಗಿ ಗ್ರಾಮಕ್ಕೆ ಇಬ್ಬರೂ ಬಂದಾಗ ಬಸವಣ್ಣ ಶಿವೈಕ್ಯನಾದನೆಂಬ ವಿಷಯ ತಿಳಿದು ಬರುತ್ತದೆ ಮತ್ತು ಈ ಸುದ್ದಿಯನ್ನು ಕೇಳಿದ ನೀಲಮ್ಮನ ಪ್ರಾಣ ಹೊರಟು ಹೋಗುತ್ತದೆ; ಅವಳು ತನ್ನ ಲಿಂಗದಲ್ಲಿಯೇ ಬಯಲಾಗಿ ಬಿಡುತ್ತಾಳೆ. ಇಂದಿಗೂ ಈ ಗ್ರಾಮದಲ್ಲಿ ನೀಲಾಂಬಿಕೆಯ ಸಮಾಧಿ ಇದ್ದು, ನಿತ್ಯ ಪೂಜೆಗಳು ನಡೆಯುತ್ತವೆ.

ಒಟ್ಟಿನಲ್ಲಿ ವಿಚಾರಪತ್ನಿ, ಆಚಾರಪತ್ನಿಯಾಗಿ ಐಕ್ಯದವರೆಗೂ ತಮ್ಮ ಕರ್ತವ್ಯ ನಿರ್ವಹಿಸಿದ ನೀಲಾಂಬಿಕೆ ತಮ್ಮ ಅಸ್ಮಿತೆಯನ್ನು ಉಳಿಸಿಕೊಳ್ಳುತ್ತಲೇ ಬಸವ ನಿಷ್ಠೆಯನ್ನು ತತ್ವಶಃ ಪಾಲಿಸಿದವಳು.

**ಪರಾಮರ್ಶನ ಗ್ರಂಥಗಳು:**

1. ವಿಜಯಶ್ರೀ ಸಬರದ, (2022), ಶಿವಶರಣೆಯರ ಸಾಹಿತ್ಯ ಚರಿತ್ರೆ, ಬೆಂಗಳೂರು: ಕ್ರಿಯಾ ಮಾಧ್ಯಮ.
2. ಕಾವ್ಯಶ್ರೀ. ಜಿ, (2015), ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ, ಚಿತ್ರದುರ್ಗ: ಆದಿತ್ಯ ಪಬ್ಲಿಕೇಶನ್.
3. ವಿಜಯಶ್ರೀ ಸಬರದ, (2022), ಶಿವಶರಣೆಯರ ಸಾಹಿತ್ಯ ಚರಿತ್ರೆ, ಬೆಂಗಳೂರು: ಕ್ರಿಯಾ ಮಾಧ್ಯಮ.
4. ಮ.ನಿ.ಪ್ರ. ಹಿರಿಶಾಂತವೀರ ಮಹಾಸ್ವಾಮಿಗಳು, (2016), ಗಂಗಾಂಬಿಕೆ ನೀಲಾಂಬಿಕೆ ಒಂದು ಅಧ್ಯಯನ, ಸೊಂಡೂರು: ಪ್ರಭುದೇವರ ಜನಕಲ್ಯಾಣ ಸಂಸ್ಥೆ.
5. ಕಾವ್ಯಶ್ರೀ. ಜಿ, (2015), ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ, ಚಿತ್ರದುರ್ಗ: ಆದಿತ್ಯ ಪಬ್ಲಿಕೇಶನ್.